# ಬಿಗ್‌ಬಾಸ್ ಮನೆಯ ದೊಡ್ ದೊಡ್ ಮಂದಿ

ಒಂಟಿ ಮನೇಲಿ ದೊಡ್ ದೊಡ್ ಮಂದಿ
ಉದ್ದುದ ಅಡ್ಡಡ್ಡ ಮಲಗವ್ರೇ,
ಬದ್ಕೋರು ಅವ್ರು ನೋಡೋರು ನೀವು
ಊರೆಲ್ಲ ಕ್ಯಾಮ್ರಾ ಮಡಗವ್ರೇ,
ಹೊರಗಡೆಯಿಂದ ಅರಮನೆ ಒಳಗಡೆ ಬಂದರೆ ಸೆರೆಮನೆ,
98 ದಿನ ಜೀವಂತ ಇದ್ದರೆ ಅವ್ರಿಗೆ ಹಾಫ್ ಕೋಟಿ ರೂಪಾಯಿ,
ಬಿಗ್‌ಬಾಸ್ ಬಿಗ್‌ಬಾಸ್...






ಹೌದು ಸ್ವಾಮಿ, ಕಲರ್ಸ್ ಕನ್ನಡದ ಬಹುನಿರೀಕ್ಷಿತ ರಿಯಾಲಿಟಿ ಶೋ ಬಿಗ್‌ಬಾಸ್ ಈಗಾಗಲೇ ಆರಂಭವಾಗಿದೆ. ಕನ್ನಡ ಜನರ ಕಣ್ಮನ ಸೆಳೆದಿರುವ ಈ ಅತಿ ದೊಡ್ಡ ರಿಯಾಲಿಟಿ ಶೋದಲ್ಲಿ ಈ ವರ್ಷ ಇರುವ ದೊಡ್ ದೊಡ್ ಮಂದಿ ಯಾರು ಎಂಬ ಎಲ್ಲ ಊಹಾಪೋಹಗಳಿಗೆ ತೆರೆ ಬಿದ್ದಿದೆ. ಹದಿನೈದು ಮಂದಿ ಮುಂದಿನ ನೂರು ದಿನಗಳ ಕಾಲ ಬಿಡದಿ ಬಳಿಯ ಇನ್ನೋವೇಟಿವ್ ಫಿಲ್ಮ್ ಸಿಟಿಯಲ್ಲಿ ಹೊಸದಾಗಿ ನಿರ್ಮಾಣವಾಗಿರುವ ಮನೆಯಲ್ಲಿ ಕಾಲಕಳೆಯಲಿದ್ದಾರೆ. ಅವರ ಈ ಪ್ರಯಾಣವನ್ನು ಪ್ರತಿದಿನ ರಾತ್ರಿ 9 ಗಂಟೆಗೆ ಸರಿಯಾಗಿ ಕನ್ನಡ ಟೆಲಿವಿಷನ್ ವೀಕ್ಷಕರು ವೀಕ್ಷಿಸಲಿದ್ದಾರೆ. ಹಾಗಾದರೆ ಈ ಬಾರಿಯ ಹದಿನೈದು ಮಂದಿ ಸೆಲೆಬ್ರಿಟಿಗಳು ಯಾರ್‍ಯಾರು ಎಂಬ ಬಗ್ಗೆ ಇನ್ನೊಂದು ಬಾರಿ ಕಣ್ಣು ಹಾಯಿಸೋಣ.

### ಒಳ್ಳೆಹುಡುಗ ಪ್ರಥಮ್



ಈತ ತನ್ನನ್ನು ತಾನು ಒಳ್ಳೆಹುಡುಗ ಅಂತ ಕರೆದುಕೊಳ್ತಾರೆ. ಮಾಜಿ ಪ್ರಧಾನಿ ದೇವೇಗೌಡರಿಂದ ಹಿಡಿದು, ಜಗದೀಶ್ ಶೆಟ್ಟರ್, ಕುಮಾರಸ್ವಾಮಿ, ಡಾ. ಜಿ. ಪರಮೇಶ್ವರ ಮತ್ತಿತರರು ಇವರನ್ನು ಹರಸಿ ಕಳುಹಿಸಿದ್ದಾರೆ. ಇದಕ್ಕೆ ಹೊರತಾಗಿ ಇವರೇನೂ ಮಾಡಿದ ಹಾಗಿಲ್ಲ. ಬಿಗ್‌ಬಾಸ್‌ನಲ್ಲಿ ಏನು ಮಾಡುತ್ತಾರೋ ನೋಡಬೇಕು.

### ಶೀತಲ್ ಶೆಟ್ಟಿ



ಟೆಲಿವಿಷನ್‌ನಲ್ಲಿ ನ್ಯೂಸ್ ನೋಡುವ ಪ್ರತಿಯೊಬ್ಬರಿಗೂ ಇವರು ಪರಿಚಿತರು. ಸುಂದರ ಮೊಗದ, ಅದಕ್ಕೂ ಮಿಗಿಲಾದ ನಗುವಿನ, ಸುಲಲಿತವಾಗಿ ಕನ್ನಡ ಮಾತನಾಡುವ ಬುದ್ಧಿವಂತೆ, ಮಂಗಳೂರಿನ ಹುಡುಗಿ. ಸೌಮ್ಯ ಸ್ವಭಾವದ ಶೀತಲ್ ಬಿಗ್‌ಬಾಸ್‌ನಲ್ಲಿ ಎಷ್ಟು ದಿನ ಉಳಿಯುತ್ತಾರೆ ನೋಡಬೇಕು.

### ಕಿರಿಕ್ ಕೀರ್ತಿ



ಹೆಸರಲ್ಲೇ ಕಿರಿಕ್ ಅಂತ ಇಟ್ಟುಕೊಂಡಿರುವ ಕನ್ನಡ ಹೋರಾಟಗಾರ. ಆದರೆ ಜನರೆಲ್ಲ ಅಂದುಕೊಂಡಷ್ಟು ಕಿರಿಕ್ ಮನುಷ್ಯ ಅಲ್ಲ. ಪತ್ರಿಕೆಗಳಲ್ಲಿ, ಟೆಲಿವಿಷನ್ ಚಾನೆಲ್‌ಗಳಲ್ಲಿ ಕೆಲಸ ಮಾಡಿ ಅನುಭವ ಇರುವ ಈ ಯುವಕ ಈಚೆಗೆ ಯೂಟ್ಯೂಬ್‌ನಲ್ಲಿ ಕನ್ನಡ ಪರ ವಿಡಿಯೋಗಳನ್ನು ಅಪ್‌ಲೋಡ್ ಮಾಡುವ ಮೂಲಕ ಜನಪ್ರಿಯತೆ ಪಡೆದವರು.

### ಕಾರುಣ್ಯಾ ರಾಮ್



'ಕಿರುಗೂರಿನ ಗಯ್ಯಾಳಿಗಳು' ಮತ್ತು ಶಿವರಾಜ್‌ಕುಮಾರ್ ಅಭಿನಯದ 'ವಜ್ರಕಾಯ' ಚಿತ್ರಗಳಲ್ಲಿ ಅಭಿನಯಿಸಿರುವ ಕಾರುಣ್ಯಾ ರಾಮ್ ಚಿತ್ರರಂಗದಲ್ಲಿ ಬೆಳೆಯುತ್ತಿರುವ ಪ್ರತಿಭೆ. ಈ ಹಿಂದೆ 'ಸೂಪರ್ ಮಿನಿಟ್' ಆಟದಲ್ಲಿ ಸಂಕಷ್ಟದಲ್ಲಿರುವ ರೈತ ಮಹಿಳೆಗೆ ಸಾಕಷ್ಟು ಹಣ ಗೆದ್ದು ಕೊಟ್ಟು ಜನಮನ ಗೆದ್ದವರು.

### ಚೈತ್ರಾ



'ಅಮೃತಧಾರೆ'ಯ 'ಹುಡುಗ ಹುಡುಗ' ಹಾಡು ಹಾಡಿದವರು. ಇನ್ನೂ ಅನೇಕ ಹಾಡುಗಳನ್ನು ಹಾಡಿರುವ ಸುಮಧುರ ಕಂಠದ ಹಾಡುಗಾರ್ತಿ. ಇವರು ಇರುವಷ್ಟು ದಿನ ಬಿಗ್‌ಬಾಸ್ ಮನೆಯಲ್ಲಿ ಕಿವಿಗಿಂಪಾಗುವ ಹಾಡುಗಳಿಗೆ ಕೊರತೆ ಇರದು.

### ಮಾಳವಿಕಾ



ಕನ್ನಡ ಚಲನಚಿತ್ರ ಮತ್ತು ಟೆಲಿವಿಷನ್‌ನಲ್ಲಿ ದೊಡ್ಡ ಹೆಸರು. ಟಿ.ಎನ್. ಸೀತಾರಾಂ ಅವರ ಸೀರಿಯಲ್‌ಗಳಲ್ಲಿ ಮಾಧವಿ ಪಟೇಲ್ ಮುಂತಾಗಿ ಇವರು ಮಾಡಿರುವ ಪಾತ್ರಗಳನ್ನು ಯಾರೂ ಮರೆಯಲು ಸಾಧ್ಯವಿಲ್ಲ. ಘನತೆ, ಗಾಂಭೀರ್ಯ ಇವರ ಒಡವೆಗಳು.

### ದೊಡ್ಡ ಗಣೇಶ್



ಅಂತಾರಾಷ್ಟ್ರೀಯ ಮಟ್ಟದ ಕ್ರಿಕೆಟ್ ಆಟಗಾರ. ಕರ್ನಾಟಕ ಕ್ರಿಕೆಟ್‌ನ ದೊಡ್ಡ ಹೆಸರು. ರಣಜಿಯಲ್ಲಿ 365 ವಿಕೆಟ್ ಪಡೆದಿರುವ ಇವರು ಈ ಹಿಂದೆ ಒಂದು ಡ್ಯಾನ್ಸ್ ಶೋದಲ್ಲೂ ಭಾಗವಹಿಸಿದ್ದರು. ಬಿಗ್‌ಬಾಸ್ ಶೋದಲ್ಲಿ ಇವರ ವ್ಯಕ್ತಿತ್ವದ ಇತರ ಮಜಲುಗಳು ಪರಿಚಯ ಆಗುವ ಸಾಧ್ಯತೆಗಳಿವೆ.

### ಮೋಹನ್



ನಟ, ನಿರ್ದೇಶಕ, ನಿರ್ಮಾಪಕ, ಬರಹಗಾರ– ಹೀಗೆ ಚಲನಚಿತ್ರ ಕ್ಷೇತ್ರದಲ್ಲಿ ಹಲವಾರು ವರ್ಷಗಳಿಂದ ಕೆಲಸ ಮಾಡಿರುವ ಪ್ರತಿಭಾವಂತ. ಸಣ್ಣ ವಯಸ್ಸಿನ ಹುಡುಗ ಹುಡುಗಿಯರೇ ಹೆಚ್ಚಾಗಿರುವ ಬಿಗ್‌ಬಾಸ್ ಶೋದಲ್ಲಿ ಎಲ್ಲರನ್ನೂ ಸರಿದಾರಿಯಲ್ಲಿ ಕರೆದೊಯ್ಯಬಲ್ಲ ಅನುಭವಸ್ಥ.

### ಭುವನ್ ಪೊನ್ನಣ್ಣ



ಚಲನಚಿತ್ರ ರಂಗದಲ್ಲಿ ಹೆಸರು ಮಾಡಬೇಕು ಎಂದು ಹವಣಿಸುತ್ತಿರುವ ಅಸಂಖ್ಯ ಹುಡುಗರ ಪೈಕಿ ಒಬ್ಬರು. ಕೊಡಗಿನ ಈ ಸ್ಫುರದ್ರೂಪಿ ಯುವಕ ಈ ಹಿಂದೆ 'ಇಂಡಿಯನ್' ಎಂಬ ರಿಯಾಲಿಟಿ ಶೋದಲ್ಲಿ ಸಾಕಷ್ಟು ಹೆಸರು ಗಳಿಸಿದ್ದರು. ಬಿಗ್‌ಬಾಸ್ ಮನೆಯ ಲವರ್ ಬಾಯ್.

### ಶಾಲಿನಿ



ಪಾ.ಪ. ಪಾಂಡು ಮತ್ತಿತರ ಹಾಸ್ಯ ಧಾರಾವಾಹಿಗಳನ್ನು ನೋಡಿದವರಿಗೆ ಶಾಲಿನಿ ಬಗ್ಗೆ ಹೇಳಬೇಕಾಗಿಲ್ಲ. ನೋಡಿದರೇ ನಗು ಉಕ್ಕಿಸುವ ಈಕೆ ಟೆಲಿವಿಷನ್ ಮತ್ತು ರೇಡಿಯೋಗಳಲ್ಲಿ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದವರು, ನಡೆಸಿಕೊಟ್ಟವರು. ತುಂಬಾ ಪಾಸಿಟಿವ್ ವ್ಯಕ್ತಿತ್ವ ಇರುವ ಶಾಲಿನಿ ಇರುವ ಕಡೆ ಡಲ್ ಕ್ಷಣಗಳು ಇರುವ ಸಾಧ್ಯತೆ ಕಡಿಮೆ.

### ಕಾವ್ಯಾ ಶಾಸ್ತ್ರಿ



ಬ್ಯೂಟಿ ಅಂಡ್ ಬ್ರೇನ್ ಅಂತಾರಲ್ಲ ಹಾಗೆ. ಟೆಲಿವಿಷನ್ ಧಾರಾವಾಹಿ, ನಿರೂಪಣೆ ಮತ್ತಿತರ ಕ್ಷೇತ್ರಗಳಲ್ಲಿ ಸಾಕಷ್ಟು ಹೆಸರು ಮಾಡಿದವರು. ಸುಂದರವಾಗಿರುವ ಹುಡುಗಿಯರು ಬುದ್ಧಿವಂತರೂ ಇರಲು ಸಾಧ್ಯ ಎಂಬುದನ್ನು ನಿರೂಪಿಸುವಂಥ ಹುಡುಗಿ.

### ನಿರಂಜನ್ ದೇಶಪಾಂಡೆ



ಇವರು ಕೂಡಾ ಟೆಲಿವಿಷನ್‌ನ ಜನಪ್ರಿಯ ನಿರೂಪಕ. ಜೀವನದಲ್ಲಿ ಸಾಕಷ್ಟು ಏಳು ಬೀಳುಗಳನ್ನು ಕಂಡಿರುವ ನಿರಂಜನ್, ಸ್ವಂತ ಪರಿಶ್ರಮದಿಂದ ಮೇಲೆ ಬಂದವರು. ಈಗ ತನ್ನ ಕಾಲ ಮೇಲೆ ತಾವೇ ನಿಲ್ಲಲು ಪ್ರಯತ್ನಿಸುತ್ತಿರುವವರು.

### ವಾಣಿಶ್ರೀ



ಕನ್ನಡ ಚಲನಚಿತ್ರ ಹಾಗೂ ಟೆಲಿವಿಷನ್ ಕ್ಷೇತ್ರದಲ್ಲಿ ಇನ್ನೊಂದು ದೊಡ್ಡ ಹೆಸರು. ಸುಮಾರು 45ಕ್ಕೂ ಹೆಚ್ಚು ಚಲನಚಿತ್ರಗಳಲ್ಲಿ ನಟಿಸಿರುವ ಇವರು ಈಚೆಗೆ ಟೆಲಿವಿಷನ್‌ನಲ್ಲಿ ಜನಪ್ರಿಯ ಅಮ್ಮ. ಬಿಗ್‌ಬಾಸ್ ಮನೆಯಲ್ಲೂ ದೊಡ್ಡಕ್ಕ ಅಥವಾ ಅಮ್ಮನ ಸ್ಥಾನ ತುಂಬಬಲ್ಲ ಆಕರ್ಷಕ ವ್ಯಕ್ತಿತ್ವ.

### ರೇಖಾ



ಕಿಚ್ಚ ಸುದೀಪ್ ಅವರು ನಾಯಕನಾಗಿ ಅಭಿನಯಿಸಿದ ಮೊದಲ ಚಿತ್ರ 'ಸ್ಪರ್ಶ'ದ ನಾಯಕಿ. ದರ್ಶನ್ ಅವರ 'ಮೆಜೆಸ್ಟಿಕ್' ಚಿತ್ರದ ನಾಯಕಿ ಕೂಡಾ. ಆದರೆ ಆನಂತರ ಚಿತ್ರರಂಗ ಬಿಟ್ಟು ಮದುವೆಯಾಗಿ ಅಮೆರಿಕಕ್ಕೆ ಹಾರಿ ಈಗ ವಾಪಸ್ ಬಂದಿದ್ದಾರೆ. ಬಿಗ್‌ಬಾಸ್ ಶೋಗೆ ಘನತೆ ತರುವಂಥ ಮಹಿಳೆ.

### ಸಂಜನಾ ಚಿದಾನಂದ್



ಒಂದೆರಡು ಟೆಲಿವಿಷನ್ ಧಾರಾವಾಹಿಗಳಲ್ಲಿ ಅಭಿನಯಿಸಿ ಅನುಭವ ಇರುವ ಸಣ್ಣ ವಯಸ್ಸಿನ ಸುಂದರ ಹುಡುಗಿ. ಅಪ್ಪ, ಅಮ್ಮನ ಈ ಮುದ್ದಿನ ಮಗಳು ದೇಶ, ಭಾಷೆ ಮತ್ತಿತರ ಗಂಭೀರ ವಿಷಯಗಳ ಬಗ್ಗೆ ಹೆಚ್ಚಾಗಿ ತಲೆ ಕೆಡಿಸಿಕೊಳ್ಳುವವಳಲ್ಲ. ಬಿಗ್‌ಬಾಸ್ ಶೋಗೆ ಗ್ಲಾಮರ್ ತುಂಬಬಲ್ಲ ಸುಂದರಿ.